# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 152 / 2021

ಪಿರ್ಯಾದುದಾರರು ಃ ಮಾಗಡಿ ಪೋಲಿಸ್ ಠಾಣೆ

**ವಿರುದ್ಧ**

**ಆರೋಪಿತ** ಃ **ರಾಮಕೃಷ್ಣಯ್ಯ ಬಿನ್ ಲೇಟ್ ರಂಗಯ್ಯ**
**48 ವರ್ಷಗಳು,**
**ವಾಸಃ ಮೊದಲಾರಯ್ಯನಪಾಳ್ಯ,**
**ಕಸಬಾ ಹೋಬಳಿ ,**
**ಮಾಗಡಿ ತಾಲ್ಲೂಕು .**

## ಕಲಂ-313 ದಂಡ ಪ್ರಕ್ರಿಯಾ ಸಂಹಿತೆ ಅಡಿ ಆರೋಪಿತನ ಹೇಳಿಕೆ

**ಪ್ರಶ್ನೆ-1** ಃ ಈ ಪ್ರಕರಣದಲ್ಲಿ ನುಡಿದಿರುವ ಸಾಕ್ಷಿಗಳ ಹೇಳಿಕೆಗಳನ್ನು ಕೇಳಿ ತಿಳಿದುಕೊಂಡಿರುತ್ತೀರಾ ?

**ಆರೋಪಿ ಉತ್ತರ** ಃ

**ಪ್ರಶ್ನೆ-2** ಃ **ಪ್ರಾಸಾ-03** ಃ **ಶ್ರೀಕಾಂತ್ ಎಸ್ ರವರು** ತಮ್ಮ ಸಾಕ್ಷ್ಯದಲ್ಲಿ ದಿನಾಂಕ 12.12.2020 ರಂದು ಗ್ರಾಮಪಂಚಾಯ್ತಿ ಚುನಾವಣೆಯ ಹಿನ್ನೆಲೆಯಲ್ಲಿ ತಾನು ಮತ್ತು ಚಾಸಾ 4ರವರೊಂದಿಗೆ ಠಾಣಾ ಸರಹದ್ದಿನಲ್ಲಿ ಗಸ್ತಿನಲ್ಲಿ ಇರುವಾಗ ಮಾದಲಾರಯ್ಯನಪಾಳ್ಯ ಗ್ರಾದವ ರಾಮಕೃಷ್ಣಯ್ಯ ಎಂಬುವವರು ಅಕ್ರಮವಾಗಿ ಮದ್ಯವನ್ನು ಸಂಗ್ರಹಿಸಿಕೊಂಡು ಹೋಗುತ್ತಿದ್ದಾರೆ ಎಂದು ಖಚಿತ ಬಾತ್ಮಿ ಬಂದಿರುತ್ತದೆ. ಕೂಡಲೆ ತಾನು ಚಾಸಾ 2 ಮತ್ತು 3 ರವರಿಗೆ ಸದರಿ ವಿಷಯವನ್ನು ತಿಳಿಸಿ ಸುಮಾರು 2.30 ಗಂಟೆಗೆ ಮದಲಾರಯ್ಯನಪಾಳ್ಯದ ಅರಳೀಮರದ ಬಳಿ ಹೋಗಿರುತ್ತೇವೆ. ಅಲ್ಲಿ ಒಬ್ಬ ಆಸಾಮಿಯು ತಾವು ಸಮವಸ್ತ್ರದಲ್ಲಿ ಇರುವುದನ್ನು ನೋಡಿ ಚೀಲವನ್ನು ಬಿಸಾಕಿ ಓಡಲು ಪ್ರಯತ್ನ ಮಾಡಿರುತ್ತಾನೆ ಎಂದು ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ ?

**ಆರೋಪಿ ಉತ್ತರ** ಃ

**ಪ್ರಶ್ನೆ-3** ಃ **ಪ್ರಾಸಾ-3 ರವರು ಮುಂದುವರೆದು** ತಮ್ಮ ಸಾಕ್ಷ್ಯದಲ್ಲಿ ಆಗ ಚಾಸಾ 4ರವರು ಆತನನ್ನು ಬೆನ್ನಟ್ಟಿ ಹಿಡಿದುಕೊಂಡು ಬಂದು ಏಕೆ ಓಡುತ್ತಿದ್ದೀಯಾ ಎಂದು ಹೆಸರು ಮತ್ತು ವಿಳಾಸ ಕೇಳಲಾಗಿ ಆತ ತನ್ನ ಹೆಸರು ರಾಮಕೃಷ್ಣಯ್ಯ 48 ವರ್ಷ, ಅಂಗಡಿ ವ್ಯಾಪಾರ, ಮದಲಾರಯ್ಯನಪಾಳ್ಯ ಎಂದು ತಿಳಿಸಿರುತ್ತಾನೆ. ನಂತರ ತಾವು ಆತನನ್ನು ಸದರಿ

ಚೀಲದಲ್ಲಿ ಏನು ಇದೆ ಎಂದು ಕೇಳಲಾಗಿ ಆತನು ಮದ್ಯದ ಬಾಟೆಲುಗಳು ಇರುತ್ತವೆ ಎಂದು ತಿಳಿಸಿರುತ್ತಾರೆ. ನಂತರ ಪಂಚರ ಸಮಕ್ಷಮ ಸದರಿ ಚೀಲವನ್ನು ತೆಗೆದು ನೋಡಲಾಗಿ ತಮಗೆ ಯಾವುದೇ ಪರವಾನಗಿ ಇಲ್ಲದ ಮದ್ಯ ಇರುವುದು ಕಂಡುಬಂದಿರುತ್ತದೆ ಎಂದು ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ ?

**ಆರೋಪಿ ಉತ್ತರ ಃ**

**ಪ್ರಶ್ನೆ-4 ಃ ಪ್ರಾಸಾ- 3 ರವರು ಮುಂದುವರೆದು** ತಮ್ಮ ಸಾಕ್ಷ್ಯದಲ್ಲಿ ಸದರಿ ಮದ್ಯ 90 ಎಂ ಎಲ್ ನ 75 ಹೈವಾರ್ಡ್ಸ್ ಪಂಚ್ 9ವಿಸ್ಕಿ, 90 ಎಂ ಎಲ್ ನ 35 ಬ್ಯಾಗ್ಪೇಪರ್ ಮತ್ತು 180 ಎಂ ಎಲ್ ನ 15 ಬ್ಯಾಗ್ ಪೇಪರ್ ಇದ್ದು ಸದರಿ ಮದ್ಯವನ್ನು ಏಕೆ ತೆಗೆದುಕೊಂಡು ಹೋಗುತ್ತಿದ್ದೀಯಾ ಎಂದು ಕೇಳಲಾಗಿ ಆತನು ತನ್ನದು ಅಂಗಡಿ ಇದ್ದು ಅಂಗಡಿಯಲ್ಲಿ ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿದ್ದೇನೆ ಎಂದು ನಿಜ ಹೇಳಿರುತ್ತಾನೆ. ಸದರಿ ಮದ್ಯವನ್ನು ತೆಗೆದುಕೊಂಡು ಹೋಗಲು ಹಾಗೂ ಮಾರಾಟ ಮಾಡಲು ಪರವಾನಗಿ ಇದೆಯೆ ಎಂದು ಕೇಳಲಾಗಿ ಯಾವುದೇ ಪರವಾನಗಿ ಇರುವುದಿಲ್ಲವೆಂದು ತಿಳಿಸಿರುತ್ತಾನೆ ಎಂದು ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ ?

**ಆರೋಪಿ ಉತ್ತರ ಃ**

**ಪ್ರಶ್ನೆ-5 ಃ ಪ್ರಾಸಾ-3ರವರು ಮುಂದುವರೆದು** ತಮ್ಮ ಸಾಕ್ಷ್ಯದಲ್ಲಿ ನಂತರ ಸದರಿ ವ್ಯಕ್ತಿಯನ್ನು ವಶಕ್ಕೆ ಪಡೆದು 2.45 ರಿಂದ 3.30ರವರೆಗೆ ಮಹಜರ್ ಮುಖಾಂತರ ಎಲ್ಲಾ ಮದ್ಯವನ್ನು ಜಪ್ತಿ ಪಡಿಸಿಕೊಂಡು ಪಂಚನಾಮೆಯನ್ನು ಜರುಗಿಸಿರುತ್ತೇವೆ. ನಂತರ ಸಂಜೆ 4.00 ಗಂಟೆಗೆ ಆರೋಪಿ ಹಾಗೂ ಜಪ್ತಿ ಪಡಿಸಿಕೊಂಡ ಮದ್ಯದ ಪ್ಯಾಕುಗಳೊಂದಿಗೆ ಠಾಣೆಗೆ ಹಾಜರಾಗಿ ಚಾಸಾ 5 ರವರಿಗೆ ಒಂದು ವರಧಿಯನ್ನು ನೀಡಿರುತ್ತೇನೆ ಎಂದು ನುಡಿದಿದ್ದು, ಈ ಬಗ್ಗೆ ನೀವುಏನು ಹೇಳುವಿರಿ ?

**ಆರೋಪಿ ಉತ್ತರ ಃ**

**ಪ್ರಶ್ನೆ-6 ಃ ಪ್ರಾಸಾ-3ರವರು ಮುಂದುವರೆದು** ತಮ್ಮ ಸಾಕ್ಷ್ಯದಲ್ಲಿ ದಿನಾಂಕ 13.12.2020 ರಂದು ಪ್ರಕರಣದಲ್ಲಿ ವಶಪಡಿಸಿಕೊಂಡಂತ ಮದ್ಯದ ಮಾಲನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಲು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ದಿನಾಂಕ 25.01.2021 ರಂದು ತನಿಖೆಯನ್ನು ಮುಂದುವರೆಸಿ ಆರೋಪಿಯ ವಿರುದ್ದ ಕಲಂ 32 ಮತ್ತು 34 ಕರ್ನಾಟಕ ಅಬಕಾರಿ ಕಾಯ್ದೆ ಅಡಿ ಆರೋಪ ಸಾಭೀತಾದ ಕಾರಣ ಪ್ರಕರಣದಲ್ಲಿ ಎಫ್ ಎಸ್ ಎಲ್ ವರಧಿ ಬಾಕಿ ಇರಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರಧಿಯನ್ನು ಸಲ್ಲಿಸಿರುತ್ತೇನೆ. ದಿನಾಂಕ 05.08.2021 ರಂದು ವಿಧಿವಿಜ್ಞಾನ ಪ್ರಯೋಗಾಲಯದಿಂದ ರಾಸಾಯನಿಕ

ವರಧಿಯನ್ನು ಪಡೆದು ಮಾನ್ಯ ನ್ಯಾಯಾಲಯಕ್ಕೆ ಹೆಚ್ಚುವರಿ ವರಧಿಯನ್ನು ಸಲ್ಲಿಸಿರುತ್ತೇನೆ. ಎಂದು ನುಡಿದಿದ್ದು, ಈ ಬಗ್ಗೆ ನೀವೇನು ಹೇಳುವಿರಿ ?

**ಆರೋಪಿ ಉತ್ತರ** ಃ

**ಪ್ರಶ್ನೆ-7** ಃ**ಪ್ರಾಸಾ-4ಬೀರಪ್ಪ ರವರು** ತಮ್ಮ ಸಾಕ್ಷ್ಯದಲ್ಲಿ ದಿನಾಂಕ 12.12.2020 ರಂದು ತಾನು ಮತ್ತು ಚಾಸಾ1 ರವರು ಗ್ರಾಮಪಂಚಾಯ್ತಿ ಚುನಾವಣೆ ಸಂಬಂಧ ಗಸ್ತು ಮಾಡುತ್ತಿದ್ದಾಗ ಮಧ್ಯಹ್ನ 2.00 ಗಂಟೆ ಸುಮಾರಿಗೆ ಚಾಸಾ 1ರವರಿಗೆ ಬಾತ್ಮಿದಾರರಿಂದ ಬಾತ್ಮಿ ಬಂದಿದ್ದು, ಮೊದಲಾರಯ್ಯನಪಾಳ್ಯದ ಹತ್ತಿರ ಯಾವುದೋ ಒಬ್ಬ ವ್ಯಕ್ತಿ ಅಕ್ರಮವಾಗಿ ಮದ್ಯ ತೆಗೆದುಕೊಂಡು ಹೋಗುತ್ತಿದ್ದಾರೆ ಎಂದು ಮಾಹಿತಿ ಬಂದ ಮೇರೆಗೆ ಕೆಎ04-ಜಿ323 ಇಲಾಖಾ ವಾಹನದಲ್ಲಿ ಇಬ್ಬರು ಪಂಚರಾದ ಚಾಸಾ 2 ಮತ್ತು 3 ರವರನ್ನು ಕರೆದುಕೊಂಡು ಹೋಗಲಾಗಿ ಮೊದಲಾರಯ್ಯನಪಾಳ್ಯದ ಅರಳೀಮರದ ಹತ್ತಿರ ಒಬ್ಬ ವ್ಯಕ್ತಿಯು ಬಿಳಿ ಚೀಲದಲ್ಲಿ ಮದ್ಯವನ್ನು ತೆಗೆದುಕೊಂಡು ಹೋಗುತ್ತಿದ್ದು ಸಮವಸ್ತ್ರದಲ್ಲಿಇದ್ದ ತಮ್ಮನ್ನು ನೋಡಿ ಓಡಿಹೋಗಲು ಪ್ರಯತ್ನಿಸಿದಾಗ ಚಾಸಾ1 ಮತ್ತು ತಾವು ಅವರನ್ನು ಬೆನ್ನಟ್ಟಿ ಹಿಡಿದೆವು ಎಂದು ನುಡಿದಿದ್ದು, ಈ ಬಗ್ಗೆ ನೀವೇನು ಹೇಳುವಿರಿ ?

**ಆರೋಪಿ ಉತ್ತರ** ಃ

**ಪ್ರಶ್ನೆ-8** ಃ **ಪ್ರಾಸಾ-4 ರವರು ಮುಂದುವರೆದು** ತಮ್ಮ ಸಾಕ್ಷ್ಯದಲ್ಲಿ ಪಂಚರ ಸಮಕ್ಷಮದಲ್ಲಿ ಮದ್ಯವನ್ನು ಪರಿಶೀಲನೆ ಮಾಡಲಾಗಿ 90ಎಂಎಲ್ ನ ಹೈವಾರ್ಡ್ಸ್ ಪಂಚ್ ವಿಸ್ಕಿಯ 75 ಟೆಟ್ರಾ ಪ್ಯಾಕುಗಳು ಹಾಗೂ 90 ಎಂಎಲ್ ನ 35 ಬ್ಯಾಗ್ ಪೆಪ್ಪರ್ ವಿಸ್ಕಿಯ ಟೆಟ್ರಾ ಪ್ಯಾಕುಗಳು ಹಾಗೂ 180 ಎಂಎಲ್ ನ 15 ಬ್ಯಾಗ್ ಪೇಪರ್ ವಿಸ್ಕಿಯ ಟೆಟ್ರಾ ಪ್ಯಾಕುಗಳು ಇದ್ದು ಪಂಚನಾಮೆಯನ್ನು 2.45 ರಿಂದ 3.30ರ ವರೆಗೆ ಜರುಗಿಸಿರುತ್ತೇವೆ. ನಂತರ 4.00 ಗಂಟೆಗೆ ಠಾಣಾ ಎಸ್‌ಹೆಚ್‌ಓ ರವರ ಮುಂದೆ ಹಾಜರು ಪಡಿಸಿರುತ್ತೇವೆ. ಸದರಿ ಮದ್ಯವನ್ನು ಸಾಗಿಸುತ್ತಿದ್ದ ವ್ಯಕ್ತಿಯ ಹೆಸರನ್ನು ಕೇಳಿ ತಿಳಿಯಲಾಗಿ ಆತನು ಮೊದಲಾರಯ್ಯನಪಾಳ್ಯದ ರಾಮಕೃಷ್ಣಯ್ಯ ಎಂದು ತಿಳಿಯಿತು. ಈ ಸಂಬಂಧ ತನಿಖೆ ಸಮಯದಲ್ಲಿ ತನಿಖಾಧಿಕಾರಿಯವರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದು ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ ?

**ಆರೋಪಿ ಉತ್ತರ** ಃ

**ಪ್ರಶ್ನೆ-9** ಃ **ಪ್ರಾಸಾ-5 ಶಾಂತರಾಜು ಎಸ್ ರವರು** ತಮ್ಮ ಸಾಕ್ಷ್ಯದಲ್ಲಿ ದಿನಾಂಕ 12.02.2020 ರಂದು ಸಂಜೆ 4.00 ಗಂಟೆಗೆ ಚಾಸಾ 1 ಮತ್ತು ಚಾಸಾ4 ರವರು ಸರ್ಕಾರಿ ವಹನದಲ್ಲಿ ಆರೋಪಿ ಮತ್ತು ಮುದ್ದೆಮಾಲುಗಳನ್ನು ಠಾಣೆಗೆ ತಂದು ಹಾಜರು ಪಡಿಸಿ ವರಧಿ ನೀಡಿರುತ್ತಾರೆ. ಸದರಿ ವರಧಿ ಆಧಾರದ ಮೇಲೆ ಠಾಣಾ ಮೊಕದ್ದಮೆ ನಂ .250/2020 ರಂತೆ ಕಲಂ 32 , 34 ಕರ್ನಾಟಕ ಅಬಕಾರಿ ಕಾಯ್ದೆ ಅಡಿ ಪ್ರಥಮ

ವರ್ತಮಾನ ವರಧಿಯನ್ನು ದಾಖಲಿಸಿಕೊಂಡಿರುತ್ತೇನೆ ಎಂದು ನುಡಿದಿದ್ದು, ಈ ಬಗ್ಗೆ ನೀವೇನು ಹೇಳುವಿರಿ ?

**ಆರೋಪಿ ಉತ್ತರ ಃ**

**ಪ್ರಶ್ನೆ-10 ಃ ಪ್ರಾಸಾ-5 ರವರು** ತಮ್ಮ ಸಾಕ್ಷ್ಯದಲ್ಲಿ ಸದರಿ ನಿವೇದನೆಯೊಂದಿಗೆ ಚಾಸಾ 1 ರವರು ಪಂಚರ ಸಮಕ್ಷಮ ಜರುಗಿಸಿದ ಮಹಜರನ್ನು ನೀಡಿರುತ್ತಾರೆ. ಪ್ಲಾಸ್ಟಿಕ್ ಚೀಲದಲ್ಲಿ 90 ಎಂ ಎಲ್ ನ 75 ಹೈವಾರ್ಡ್ಸ್ ಪಂಚ್ ವಿಸ್ಕಿಯ ಟೆಟ್ರ ಪ್ಯಾಕುಗಳನ್ನು ಹಾಗೂ 90 ಎಂ ಎಲ್ ನ 35 ಬ್ಯಾಗ್ಪೇಪರ್ ಟೆಟ್ರಾ ಪ್ಯಾಕ್ ಹಾಗು 180 ಎಂ ಎಲ್ ನ 15 ಬ್ಯಾಗ್ ಪೇಪರ್ ಟೆಟ್ರಾ ಪ್ಯಾಕುಗಳನ್ನು ಸಹ ಹಾಜರು ಪಡಿಸಿರುತ್ತಾರೆ. ನಂತರ ಸದರಿ ಮುದ್ದೆಮಾಲುಗಳನ್ನು ತಾನು ಠಾಣಾ ಪಿಫ್ ನಂ.236/2020 ರಂತೆ ನಮೂದಿಸಿಕೊಂಡಿರುತ್ತೇನೆ ಎಂದು ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ ?

**ಆರೋಪಿ ಉತ್ತರ ಃ**

**ಪ್ರಶ್ನೆ-11 ಃ ಪ್ರಾಸಾ-5 ರವರು ಮುಂದುವರೆದು**ತಮ್ಮ ಸಾಕ್ಷ್ಯದಲ್ಲಿ ನಂತರ ದಸ್ತಗಿರಿ ಕಾನೂನು ಕ್ರಮಗಳನ್ನು ಅನುಸರಿಸಿ ಆರೋಪಿಯನ್ನು ಮಾನ್ಯ ನ್ಯಾಯಾಲಯದ ಮುಂದೆ ಹಾಜರು ಪಡಿಸಿರುತ್ತೇವೆ. ಚಾಸಾ2 ರಿಂದ 4 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ನಂತರ ಪ್ರಕರಣದ ತನಿಖೆ ಮುಕ್ತಾಯಗೊಂಡಿದ್ದರಿಂದ ಮಾನ್ಯ ನ್ಯಾಯಾಲಯಕ್ಕೆ ಆರೋಪಿಯ ವಿರುದ್ದ ಅಂತಿಮ ವರಧಿಯನ್ನು ಸಲ್ಲಿಸಿರುತ್ತೇವೆ ಎಂದು ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ ?

**ಆರೋಪಿ ಉತ್ತರ ಃ**

**ಪ್ರಶ್ನೆ-12 ಃ** ನೀವು ಏನಾದರೂ ಹೇಳಲು ಬಯಸುವಿರಾ ?

**ಆರೋಪಿ ಉತ್ತರ ಃ**

**ಪ್ರಶ್ನೆ-13 ಃ** ನಿಮ್ಮ ಪರವಾಗಿ ಸಾಕ್ಷಿದಾರರ ವಿಚಾರಣೆ ಮಾಡಿಸುತ್ತೀರಾ ?

**ಆರೋಪಿ ಉತ್ತರ ಃ**

( ಈ ಮೇಲ್ಕಂಡ ಆರೋಪಿತನ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ನನ್ನ ಸಮಕ್ಷಮ ದಿನಾಂಕಃ 07.03.2026 ರಂದು ಸಹಿ ಮಾಡಿರುತ್ತಾರೆ )

(ಶ್ರೀ ಶ್ರೀನಿವಾಸ ಕೆ ಆರ್. )
ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು
ಜೆಎಂಎಫ್‌ಸಿ ನ್ಯಾಯಾಲಯ, ಮಾಗಡಿ.

**ಆರೋಪಿ ಸಹಿ ಃ**